# All India Radio: Bangalore
# National Bulletins In Kannada
# 01.06.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

## 01.06.2025 / 7.35 am

**<><*<><>*><>**

<u>ಮುಖ್ಯಾಂಶಗಳು</u>

೧. ದೇಶಾದ್ಯಂತ ಇಂದಿನಿಂದ ಜನೌಷಧಿ ಕೇಂದ್ರದ ಅನುಭವ ಕಲಿಕಾ ಕಾರ್ಯಕ್ರಮಕ್ಕೆ ಚಾಲನೆ

೨. ಪಾಕಿಸ್ತಾನ ಸಂಬಂಧಿತ ಗುಪ್ತಚರ ಪ್ರಕರಣ; ಎನ್‌ಐಎ ಯಿಂದ ದೇಶದ ಎಂಟು ರಾಜ್ಯಗಳ ೧೫ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ

೩. ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್; ಇಂದು ದೇಶಾದ್ಯಂತ ವಿಶೇಷ ತಿರಂಗ ರ‍್ಯಾಲಿಯಾಗಿ ಆಚರಣೆ

೪. ಐಪಿಎಲ್ ಕ್ರಿಕೆಟ್ ಟಿ-೨೦ ಕ್ರಿಕೆಟ್‌ಲ್ ಕ್ರಿಕೆಟ್ ಟಿ-೨೦ ಕ್ರಿಕೆಸ್ ಪಕ್ಷದ ; ೨ನೇ ಕ್ವಾಲಿಫೈಯರ್ ಪಂದ್ಯದಲ್ಲಿಂದು ಮುಂಬೈ ಇಂಡಿಯನ್ಸ್ -ಪಂಜಾಬ್ ಕಿಂಗ್ಸ್ ಮುಖಾಮುಖಿ

**<><*<><>*><>**

ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಔಷಧಿ ಇಲಾಖೆಯ ಸಹಯೋಗದೊಂದಿಗೆ ಇಂದು ಜನೌಷಧಿ ಕೇಂದ್ರದ ಅನುಭವ ಕಲಿಕಾ ಕಾರ್ಯಕ್ರಮವನ್ನು ಪ್ರಾರಂಭಿಸಲಿದೆ. ೧೫ ದಿನಗಳ ಕಾಲ ನಡೆಯಲಿರುವ ಈ ಕಾರ್ಯಕ್ರಮದಡಿಯಲ್ಲಿ, ದೇಶಾದ್ಯಂತ ಪ್ರತಿ ಜಿಲ್ಲೆಯ ಐದು ಜನೌಷಧಿ ಕೇಂದ್ರಗಳಿಗೆ ಐದು ಯುವ ಸ್ವಯಂಸೇವಕರನ್ನು ನಿಯೋಜಿಸಲಾಗುವುದು. ದೈನಂದಿನ ಕಾರ್ಯಾಚರಣೆಗಳಿಗೆ ಸಹಾಯ ಮಾಡುವುದು, ದಾಸ್ತಾನು ಮತ್ತು ಔಷಧಿ ನಿರ್ವಹಣೆಯನ್ನು ಬೆಂಬಲಿಸುವುದು, ಜೆನೆರಿಕ್ ಔಷಧಿಗಳು ಮತ್ತು ಸಾರ್ವಜನಿಕ ಆರೋಗ್ಯ ಸಾಕ್ಷರತೆಯ ಬಗ್ಗೆ ಜಾಗೃತಿ ಮೂಡಿಸುವುದು ಸೇರಿದಂತೆ ಹಲವಾರು ಜವಾಬ್ದಾರಿಗಳಲ್ಲಿ ಸ್ವಯಂಸೇವಕರು ಭಾಗಿಯಾಗಿರುತ್ತಾರೆ. ಜನೌಷಧಿ ಕೇಂದ್ರಗಳಲ್ಲಿ ಯುವ ಸ್ವಯಂಸೇವಕರನ್ನು ಬಳಸಿಕೊಳ್ಳುವ ಮೂಲಕ, ಈ ಕಾರ್ಯಕ್ರಮವು ಪ್ರಾಯೋಗಿಕ ಕಲಿಕೆಯನ್ನು ಉತ್ತೇಜಿಸುವುದಲ್ಲದೆ, ಸೇವೆ, ಶಿಸ್ತು ಮತ್ತು ಸಮುದಾಯ-ಆಧಾರಿತ ವೃತ್ತಿಪರತೆಯ ಮೌಲ್ಯಗಳನ್ನು ಉತ್ತೇಜಿಸುತ್ತದೆ.

**<><*<><>*><>**

ಪಾಕಿಸ್ತಾನ ಸಂಬಂಧಿತ ಗೂಢಾಚಾರ್ಯ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ - ಎನ್‌ಐಎ ದೇಶದ ಎಂಟು ರಾಜ್ಯಗಳ ೧೫ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದೆ. ತಮ್ಮ ಅಧಿಕೃತ ಪ್ರಕಟಣೆಯಲ್ಲಿ ಎನ್‌ಐಎ, ದೆಹಲಿ, ಮುಂಬೈ, ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಪಾಕಿಸ್ತಾನದ ಗುಪ್ತಚರ ಅಧಿಕಾರಿಗಳ ಪಿಐಒ ಜೊತೆ ಸಂಪರ್ಕ ಹೊಂದಿರುವ ಶಂಕಿತರ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಶೋಧ ನಡೆಸಲಾಗಿದೆ ಎಂದು ತಿಳಿಸಿದೆ. ಈ ಶೋಧ ಕಾರ್ಯಾಚರಣೆಯ ವೇಳೆ ಹಲವಾರು ಎಲೆಕ್ಟ್ರಾನಿಕ್ ಸಾಧನಗಳು, ಹಣಕಾಸು ಹಾಗೂ ಇತರ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆಯ ಬಳಿಕ, ಈ ಶಂಕಿತರು ಪಾಕಿಸ್ತಾನಿ ಗುಪ್ತಚರ ಅಧಿಕಾರಿಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದು, ಭಾರತದಲ್ಲಿ ಗುಪ್ತಚರ ಚಟುವಟಿಕೆಗಳನ್ನು ನಡೆಸಲು ಹಣಕಾಸಿನ ಮೂಲಕ ಸಹಾಯ ನೀಡುತ್ತಿದ್ದರೆಂದು ತಿಳಿದುಬಂದಿದೆ. ಈ ಪ್ರಕರಣವನ್ನು ಎನ್‌ಐಎ ಕಳೆದ ವರ್ಷ ೨೦೨೩ರಿಂದ ಪಾಕಿಸ್ತಾನಿ ಗುಪ್ತಚರರಿಗೆ ರಾಷ್ಟ್ರೀಯ ಭದ್ರತೆ ಸಂಬಂಧಿತ ಮಾಹಿತಿಗಳನ್ನು ಪೂರೈಸುತ್ತಿದ್ದ ಆರೋಪಿಯೊಬ್ಬನ ಬಂಧನದ ನಂತರ ದಾಖಲಿಸಿತ್ತು. ಈ ಸಂಬಂಧದ ಇನ್ನೂ ತನಿಖೆ ಮುಂದುವರಿದಿದೆ.

<><*<><>*><>

'ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್' ಉಪಕ್ರಮದ ೨೫ನೇ ಆವೃತ್ತಿಯನ್ನು ಇಂದು ದೇಶಾದ್ಯಂತ ವಿಶೇಷ ತಿರಂಗ ರ್ಯಾಲಿಯಾಗಿ ಆಚರಿಸಲಾಗುವುದು. ದೆಹಲಿಯಲ್ಲಿ ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ರ್ಯಾಲಿಯ ನೇತೃತ್ವ ವಹಿಸಲಿದ್ದಾರೆ. ಒಲಿಂಪಿಕ್ ಪದಕ ವಿಜೇತ ಯೋಗೇಶ್ವರ್ ದತ್, ಅಂತರರಾಷ್ಟ್ರೀಯ ಕುಸ್ತಿಪಟು ಸರಿತಾ ಮೋರ್, ಬಾಲಿವುಡ್ ನಟಿ ಶಾರ್ವರಿ ಮತ್ತು ಮಾಜಿ ಕ್ರಿಕೆಟಿಗ ಸಬಾ ಕರೀಮ್ ಸೇರಿದಂತೆ ಕ್ರೀಡೆ ಮತ್ತು ಮನರಂಜನಾ ಕ್ಷೇತ್ರದ ಪ್ರಮುಖ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಜೂನ್ ೩ ರಂದು ವಿಶ್ವ ಬೈಸಿಕಲ್ ದಿನವೆಂದು ಪರಿಗಣಿಸಿರುವುದರಿಂದ ಈ ಕಾರ್ಯಕ್ರಮವು ಫಿಟ್‌ನೆಸ್‌ನಲ್ಲಿ ಸೈಕ್ಲಿಂಗ್‌ನ ಪ್ರಮುಖ ಪಾತ್ರದ ಕುರಿತು ಸಂದೇಶ ನೀಡಲಿದೆ. ಈ ರ್ಯಾಲಿಯಲ್ಲಿ ೧ ಸಾವಿರದ ೨೦೦ಕ್ಕೂ ಹೆಚ್ಚು ಸೈಕ್ಲಿಸ್ಟ್‌ಗಳನ್ನು ನಿರೀಕ್ಷಿಸಲಾಗಿದೆ ಹಾಗೂ ದೇಶಾದ್ಯಂತ ಎರಡು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಚಿವಾಲಯ ಹೇಳಿದೆ. ಈ ಆಂದೋಲನಕ್ಕೆ ಸಾನಿಯಾ ಮಿರ್ಜಾ, ಮಿಲಿಂದ್ ಸೋಮನ್, ಇಮ್ರಾನ್ ಹಶ್ಮಿ, ಜಾನ್ ಅಬ್ರಹಾಂ, ಇಮ್ತಿಯಾಜ್ ಅಲಿ ಮತ್ತು ಶಂಕರ್ ಮಹಾದೇವನ್ ಸೇರಿದಂತೆ ಇತರ ಪ್ರಮುಖ ವ್ಯಕ್ತಿಗಳು ಬೆಂಬಲ ನೀಡುತ್ತಿದ್ದಾರೆ.

<><*<><>*><>

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು, ಇಂದು ಉತ್ತರ ಪ್ರದೇಶದ ಆಗ್ರಾಕ್ಕೆ ಭೇಟಿ ನೀಡಲಿದ್ದಾರೆ. ಅವರ ಭೇಟಿಯ ಸಮಯದಲ್ಲಿ, ಅವರು ಮಾತಾ ಅಹಲ್ಯಾ ಬಾಯಿ ಹೋಳ್ಕರ್ ಅವರ ೩೦೦ನೇ ಜನ್ಮ ದಿನಾಚರಣೆಯ ಸ್ಮರಣಾರ್ಥದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

<><*<><>*><>

ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಭಾರತದ ದೃಢ ಬದ್ಧತೆಯ ಸಲುವಾಗಿ ಏಳು ಸರ್ವಪಕ್ಷ ನಿಯೋಗಗಳು ವಿದೇಶ ಭೇಟಿಗಳ ಸಮಯದಲ್ಲಿ ಉನ್ನತ ಮಟ್ಟದ ಚರ್ಚೆಗಳಲ್ಲಿ ತೊಡಗಿವೆ. ಪ್ರಸ್ತುತ ಇಥಿಯೋಪಿಯಾಕ್ಕೆ ಭೇಟಿ ನೀಡಿರುವ ಎನ್‌ಸಿಪಿ-ಎಸ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ನೇತೃತ್ವದ ಸರ್ವಪಕ್ಷ ನಿಯೋಗವು, ಇಥಿಯೋಪಿಯಾದ ಉನ್ನತ ಶಾಸಕರು, ಗಣ್ಯರು ಮತ್ತು ಆಫ್ರಿಕನ್ ಯೂನಿಯನ್ ಆಯೋಗದೊಂದಿಗೆ ಸಂವಾದ ಮತ್ತು ಚರ್ಚೆಗಳನ್ನು ನಡೆಸಿತು. ಈ ಸಂದರ್ಭದಲ್ಲಿ ನಿಯೋಗದ ಸದಸ್ಯರು ಗಡಿಯಾಚೆಗಿನ ಭಯೋತ್ಪಾದನೆಯ ನಿರಂತರ ಬೆದರಿಕೆಯ ಉದ್ದೇಶಪೂರ್ವಕ ಪ್ರಯತ್ನಗಳ ಬಗ್ಗೆ ಮಾಹಿತಿ ನೀಡಿದರು. ಭಯೋತ್ಪಾದನೆ ವಿರುದ್ಧ ಭಾರತ ನಡೆಸಿದಆಪರೇಷನ್ ಸಿಂಧೂರ್' ನಿರ್ಣಾಯಕ ಪಾತ್ರ ವಹಿಸಿತು ಎಂದು ತಿಳಿಸಿದೆ. ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ನೇತೃತ್ವದ ಮತ್ತೊಂದು ಸರ್ವಪಕ್ಷ ನಿಯೋಗ ಫ್ರಾನ್ಸ್, ಇಟಲಿ ಮತ್ತು ಡೆನ್ಮಾರ್ಕ್ ಭೇಟಿಯನ್ನು ಪೂರ್ಣಗೊಳಿಸಿದ ನಂತರ ಲಂಡನ್‌ಗೆ ಆಗಮಿಸಿದೆ. ಮಾಧ್ಯಮಗಳೊಂದಿಗೆ ಮಾತನಾಡಿದ ರವಿಶಂಕರ್ ಪ್ರಸಾದ್, ನಿಯೋಗವು ಇಲ್ಲಿಯೂ ಪರಿಣಾಮಕಾರಿಯಾಗಿ ನಿಲುವನ್ನು ಕಾಯ್ದುಕೊಂಡಿದೆ ಎಂದು ಹೇಳಿದರು. ಮತ್ತೊಂದೆಡೆ, ಪ್ರಸ್ತುತ ಅಲ್ಜೀರಿಯಾಕ್ಕೆ ಭೇಟಿ ನೀಡಿರುವ ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದ ನಿಯೋಗವು, ಅಲ್ಜೀರ್ಸ್‌ನಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಿತು. ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕ ದಾಳಿಯಲ್ಲಿ ಪ್ರಾಣ ಕಳೆದುಕೊಂಡವರಿಗೆ ಗೌರವ ಸಲ್ಲಿಸಲು ನಿಯೋಗವು ಒಂದು ಕ್ಷಣ ಮೌನ ಆಚರಿಸಿತು. ಡಿಎಂಕೆ ಸಂಸದೆ ಕನಿಮೋಳಿ ಕರುಣಾನಿಧಿ ನೇತೃತ್ವದ ಮತ್ತೊಂದು ನಿಯೋಗವು ಸ್ಪೇನ್‌ನ ಮ್ಯಾಡ್ರಿಡ್‌ಗೆ ಆಗಮಿಸಿದ್ದು, ಸ್ಪೇನ್‌ನ ಭಾರತದ ರಾಯಭಾರಿ ಅವರನ್ನು ಬರಮಾಡಿಕೊಂಡರು.

<><*<><>*><>

ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಯಶಸ್ವಿಯಾಗಿ ನಡೆಯುತ್ತಿದ್ದು, ಕೃಷಿ ವಿಜ್ಞಾನಿಗಳಿಂದ ರೈತರಿಗೆ ಸೂಕ್ತ ಮಾರ್ಗದರ್ಶನ ದೊರೆಯುತ್ತಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್

ಸಿಂಗ್ ಚೌಹಾಣ್ ದೆಹಲಿಯಲ್ಲಿ ನಿನ್ನೆ ತಿಳಿಸಿದ್ದಾರೆ. ಅಭಿಯಾನದಡಿ ೨ ಸಾವಿರದ ೧೦೦ ವಿಜ್ಞಾನಿಗಳು ಇದುವರೆಗೆ ದೇಶದ ೮ ಸಾವಿರಕ್ಕೂ ಅಧಿಕ ಗ್ರಾಮಗಳಿಗೆ ಭೇಟಿ ನೀಡಿದ್ದು, ೭ ಲಕ್ಷ ರೈತರೊಂದಿಗೆ ನೇರವಾಗಿ ಮಾತುಕತೆ ನಡೆಸಿದ್ದಾರೆ. ಅವರ ಸಮಸ್ಯೆಗಳನ್ನು ಅರಿತುಕೊಳ್ಳುತ್ತಿದ್ದಾರೆ. ಮಣ್ಣಿನ ಗುಣಮಟ್ಟ ಪರೀಕ್ಷಿಸುವ ಮೂಲಕ ಸೂಕ್ತ ಬೆಳೆ ಬೆಳೆಯುವ ಕುರಿತು ಮಾರ್ಗದರ್ಶನ ನೀಡುತ್ತಿದ್ದಾರೆ ಎಂದು ತಿಳಿಸಿದರು.

<><*<><>*><>

ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ಅವರು ೮ ಅಂತರರಾಷ್ಟ್ರೀಯ ಮತ್ತು ೨೩ ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಸೇರಿದಂತೆ ೪೪೮ ಕ್ರೀಡಾಪಟುಗಳಿಗೆ ೫.೬೭ ಕೋಟಿ ರೂಪಾಯಿಗಳ ಪ್ರಶಸ್ತಿ ಹಣವನ್ನು ಪ್ರದಾನ ಮಾಡಿದರು. ಪ್ಯಾರಾ-ಅಥ್ಲೀಟ್‌ಗಳಿಗೆ ಅವರ ಅಸಾಧಾರಣ ಕೊಡುಗೆಗಳಿಗಾಗಿ ವಿಶೇಷ ಮನ್ನಣೆ ನೀಡಲಾಯಿತು. ಕ್ರೀಡಾಪಟುಗಳನ್ನು ಗೌರವಿಸುವ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ.ಮಾಂಡವಿಯಾ ಅವರು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರಾಡಳಿತ ಪ್ರದೇಶ ಚಂಡೀಗಢಕ್ಕೆ ಕೀರ್ತಿ ತಂದ ಕ್ರೀಡಾಪಟುಗಳನ್ನು ಸನ್ಮಾನಿಸಿದರು, ೧.೩೨ ಕೋಟಿ ರೂಪಾಯಿಗಳ ವಿದ್ಯಾರ್ಥಿವೇತನವನ್ನು ೩೨೦ ಕ್ರೀಡಾಪಟುಗಳಿಗೆ ಆನ್‌ಲೈನ್‌ನಲ್ಲಿ ವರ್ಗಾಯಿಸಲಾಯಿತು. ಪಂಜಾಬ್ ರಾಜ್ಯಪಾಲ ಮತ್ತು ಯುಟಿ ಚಂಡೀಗಢದ ಆಡಳಿತಾಧಿಕಾರಿ ಗುಲಾಬ್ ಚಂದ್ ಕಟಾರಿಯಾ ಅವರು ಭಾಗವಹಿಸಿದ್ದ ಸಮಾರಂಭವನ್ನು ಚಂಡೀಗಢ ಕ್ರೀಡಾ ಇಲಾಖೆ ಆಯೋಜಿಸಿತ್ತು.

<><*<><>*><>

ಭಾರತೀಯ ಸೇನೆಯು ಪೋಖ್ರಾನ್ ಫೀಲ್ಡ್ ಫೈರಿಂಗ್ ರೇಂಜ್‌ಗಳು, ಬಬಿನಾ ಫೀಲ್ಡ್ ಫೈರಿಂಗ್ ರೇಂಜ್‌ಗಳು ಮತ್ತು ಜೋಶಿಮಠ ಸೇರಿದಂತೆ ದೇಶಾದ್ಯಂತ ಪ್ರಮುಖ ಸ್ಥಳಗಳಲ್ಲಿ ಮುಂದಿನ ಪೀಳಿಗೆಯ ರಕ್ಷಣಾ ತಂತ್ರಜ್ಞಾನಗಳ ಪ್ರಯೋಗಗಳನ್ನು ನಡೆಸುತ್ತಿದೆ. ಅತ್ಯಾಧುನಿಕ ರಕ್ಷಣಾ ವ್ಯವಸ್ಥೆಗಳ ಕಾರ್ಯಕ್ಷಮತೆಯನ್ನು ಕಟ್ಟುನಿಟ್ಟಾಗಿ ನಿರ್ಣಯಿಸಲು ವಿದ್ಯುನ್ಮಾನ ಯುದ್ಧ ಮಾದರಿಗಳನ್ನು ಸಂಯೋಜಿಸುವ ಮೂಲಕ, ಯುದ್ಧದ ಸಮೀಪವಿರುವ ಪರಿಸ್ಥಿತಿಗಳಲ್ಲಿ ಈ ಕ್ಷೇತ್ರ ಪ್ರಯೋಗಗಳನ್ನು ನಡೆಸಲಾಗುತ್ತಿದೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

<><*<><>*><>

ಹೈದ್ರಾಬಾದಿನಲ್ಲಿ ನಿನ್ನೆ ರಾತ್ರಿ ನಡೆದ ೭೨ನೇ ಮಿಸ್ ವರ್ಲ್ಡ್ ಸ್ಪರ್ಧೆಯಲ್ಲಿ ಥಾಯ್ಲ್ಯಾಂಡ್‌ನ ಓಪಲ್ ಸುಚತಾ ಚುವಾಂಗ್ಸ್ರಿ ಅವರು ಮಿಸ್ ವರ್ಲ್ಡ್ ೨೦೨೫ ಕಿರೀಟವನ್ನು ತಮ್ಮದಾಗಿಸಿಕೊಂಡರು. ಎಥಿಯೋಪಿಯಾದ ಹಸ್ಸೆಟ್ ಡೆರೆಜೆ ಅಡ್ಮಸ್ಸು ಮೊದಲ ರನ್ನರ್‌ಅಪ್ ಆಗಿ ಆಯ್ಕೆಯಾದರೆ, ಪೋಲ್ಯಾಂಡ್‌ನ ಮಾಯಾ ಕ್ಲಾಜ್ಡಾ ದ್ವಿತೀಯ ರನ್ನರ್‌ಅಪ್ ಆಗಿ ಘೋಷಿಸಲ್ಪಟ್ಟರು.

<><*<><>*><>

ನೈಜೀರಿಯಾದ ನೈಜರ್ ರಾಜ್ಯದ ಒಂದು ಮಾರುಕಟ್ಟೆ ಪಟ್ಟಣದಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ ಮೃಟಪಟ್ಟವರ ಸಂಖ್ಯೆ ಕನಿಷ್ಠ ೧೫೧ಕ್ಕೆ ಏರಿದೆ. ಬುಧವಾರ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಗುರುವಾರ ಬೆಳಿಗ್ಗೆ ಮೊಕ್ವಾ ಪಟ್ಟಣದಲ್ಲಿ ಈ ಭೀಕರ ಪ್ರವಾಹ ಸಂಭವಿಸಿದೆ ಎಂದು ಸ್ಥಳೀಯ ಮೂಲಗಳು ತಿಳಿಸಿವೆ. ಮೊಕ್ವಾ ನಗರ ಅಬುಜಾದಿಂದ ೩೮೦ ಕಿಲೋಮೀಟರ್ ಪಶ್ಚಿಮಕ್ಕೆ ಇರುವ ಪ್ರಮುಖ ವ್ಯಾಪಾರ ಮತ್ತು ಸಾರಿಗೆ ಕೇಂದ್ರವಾಗಿದ್ದು, ಇಲ್ಲಿ ಉತ್ತರ ನೈಜೀರಿಯಾದ ರೈತರು ಕಾಳುಗಳು, ಈರುಳ್ಳಿ ಮತ್ತು ಇತರೆ ಆಹಾರ ಪದಾರ್ಥಗಳನ್ನು ದಕ್ಷಿಣ ಭಾಗದ ವ್ಯಾಪಾರಿಗಳಿಗೆ ಮಾರುತ್ತಾರೆ. ಪ್ರವಾಹದ ಬೆನ್ನಲ್ಲೇ ೩ ಸಾವಿರಕ್ಕಿಂತ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದೆ.] ಮೂರು ಸಮುದಾಯಗಳಲ್ಲಿ ಕನಿಷ್ಠ ೫೦೦ ಕುಟುಂಬಗಳು ಈ ತೀವ್ರ ಪ್ರವಾಹದಿಂದ ಬಾಧಿತವಾಗಿವೆ.

<><*<><>*><>

ಪಾಕಿಸ್ತಾನದಲ್ಲಿ, ಬಲೂಚಿಸ್ತಾನ ಪ್ರಾಂತ್ಯದ ಸುರಾಬ್ ನಗರವನ್ನು ಬಲೂಚ್ ಲಿಬರೇಶನ್ ಆರ್ಮಿ-ಬಿಎಲ್ ಎ ಯ ಹೋರಾಟಗಾರರು ಸಂಪೂರ್ಣವಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. ಇದರ ಪರಿಣಾಮವಾಗಿ, ರಾಜ್ಯದ ಸೈನಿಕ, ಆಡಳಿತಾತ್ಮಕ ಮತ್ತು ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಅಚಲಗೊಂಡಿದೆ. BLA ಸಂಘಟನೆಯ ಪ್ರತಿನಿಧಿ ಜೀಯಂದ್ ಬಲೂಚ್ ನೀಡಿದ ಮಾಹಿತಿ ಪ್ರಕಾರ, ಈ ಕಾರ್ಯಾಚರಣೆ ಸುಮಾರು ಮೂರು ಗಂಟೆಗಳ ಕಾಲ ನಡೆದಿದ್ದು, ಈ ವೇಳೆ ಹೋರಾಟಗಾರರು ಅರೆ ಸೇನಾಪಡೆ ಕೇಂದ್ರ, ಪೊಲೀಸ್ ಠಾಣೆ, ಉಪ ಆಯುಕ್ತರ ಕಚೇರಿ, ಅತಿಥಿ ಗೃಹ ಹಾಗೂ ಬ್ಯಾಂಕ್‌ಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳಿಗೆ ಹಾನಿ ಮಾಡಿದ್ದಾರೆ. ಬಿಎಲ್ಎ ಈಗ ಸುರಾಬ್ ನಗರದ ಸಂಪೂರ್ಣ ನಿಯಂತ್ರಣ ಹೊಂದಿದ್ದು, ಕ್ವೆಟ್ಟಾ-ಕರಾಚಿ ಹಾಗೂ ಸುರಾಬ್-ಗಿದಾರ್ ಮುಖ್ಯ ಹೆದ್ದಾರಿಗಳ ಮೇಲೆ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿದೆ.

<><*<><>*><>

ಅಹಮಬಾದ್‌ಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ೨ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಪ್ರಾರಂಭವಾಗಲಿದೆ. ಈ ಪಂದ್ಯದಲ್ಲಿ ಗೆಲ್ಲುವ ತಂಡ ಜೂನ್ ೩ರಂದು ನಡೆಯುವ ಫೈನಲ್ ಪಂದ್ಯದಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**